(ಇ) ದ.ಕ. ಜಿಲ್ಲೆಯಲ್ಲಿನ ಅನಾಥಾಶ್ರಮಗಳಿಗೆ ಅನುದಾನ ಬಿಡುಗಡೆ

ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಅನಾಥಾಶ್ರಮಗಳಿಗೆ ಅನುದಾನ ಬಿಡುಗಡೆಯಾಗಿಲ್ಲ. ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ವರ್ಷದ ಕೊನೆಯಲ್ಲಿ ಅನುದಾನ ಬಿಡುಗಡೆ ಮಾಡದಿರುವುದರಿಂದ ತೊಂದರೆಯಾಗಿದೆ. ಆದುದರಿಂದ ತಕ್ಷಣ ಸ್ಪಂದಿಸಬೇಕು, ಈ ಹಣವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು :— ಇದಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಉತ್ತರಿಸಬೇಕು. ಅವರು ಕೌನ್ಸಿಲ್‌ನಲ್ಲಿ ಮೊದಲು ನನಗೆ ಪ್ರಶ್ನೋತ್ತರಕ್ಕೆ ಉತ್ತರಿಸಬೇಕಾಗಿರುವುದರಿಂದ ಅಲ್ಲಿಗೆ ಹೋಗಬೇಕೆಂದು ತಿಳಿಸಿದ್ದಾರೆ. ಅವರು ಬಂದ ಮೇಲೆ ಇದಕ್ಕೆ ಉತ್ತರ ಕೊಡುತ್ತಾರೆ.

(ಈ) ಮಂಗಳೂರು ತಾಲ್ಲೂಕಿನಲ್ಲಿ ಅನಧಿಕೃತ ಮನೆ ಹೊಂದಿದವರಿಗೆ ಹಕ್ಕು ಪತ್ರ ನೀಡುವುದು.

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) :— ಮಾನ್ಯ ಅಧ್ಯಕ್ಷರೆ, ಮಂಗಳೂರು ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಬಹಳಷ್ಟು ವರ್ಷಗಳಿಂದ ರೇಷನ್ ಕಾರ್ಡ್ ಇಲ್ಲದಿರುವವರು, ಮನೆ ನಿವೇಶನವಿಲ್ಲದಿರುವವರು, ಮನೆ ನಿವೇಶನವಿದ್ದು ಹಕ್ಕುಪತ್ರವಿಲ್ಲದಿರುವವರು, ಮತ್ತು ಓಟಿನ ಲಿಸ್ಟ್‌ನಲ್ಲಿ ಹೆಸರುಗಳು ಇಲ್ಲದೇ ಇರುವವರು ಇಂಥವರ ಸಂಖ್ಯೆ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಇದೆ. ನನಗೆ ತಿಳಿದಮಟ್ಟಿಗೆ 50 ಸಾವಿರಕ್ಕೂ ಹೆಚ್ಚಿಗೆ ಮಂಗಳೂರು ತಾಲ್ಲೂಕಿನಲ್ಲಿ ಇದ್ದಾರೆ. ಅನಧಿಕೃತವಾದ ಮನೆ, ನಿವೇಶನ ಇರುವವರಿಗೆ ಇಲ್ಲಿಯವರೆಗೆ ಹಕ್ಕುಪತ್ರ ಕೊಟ್ಟಿಲ್ಲ.

ಅಧ್ಯಕ್ಷರು :— ತಾವು ಯಾವ ಮಂತ್ರಿಯವರಿಗೆ ನೋಟಿಸ್ ಕೊಟ್ಟಿದ್ದೀರಿ.

ಶ್ರೀ ಕೆ. ಜಯರಾಮಶೆಟ್ಟಿ :— ಮಾನ್ಯ ಅಧ್ಯಕ್ಷರೆ, ಇದಕ್ಕೆ ಮಾನ್ಯ ಕಂದಾಯ ಮಂತ್ರಿಯವರು ಉತ್ತರ ಕೊಡಬೇಕು ಆಥವಾ ನಮ್ಮ ಜಿಲ್ಲೆಯ ಇಬ್ಬರು ಮಂತ್ರಿಗಳು ಇದ್ದಾರೆ.

ಅಧ್ಯಕ್ಷರು :— ನೋಟೀಸ್ ತಲುಪ್ಪಿಲ್ಲವೆಂದರೆ ನಾವು ಹೇಗೆ ಕೆಲಸ ಮಾಡಬೇಕು? ಮೊದಲೇ ಅವರಿಗೆ ನೋಟೀಸ್ ಕಳುಹಿಸುತ್ತೇನೆ, ಬಿಸಿನೆಸ್ ಎಲ್ಲಾ ಆದರಲ್ಲಿ ತೋರಿಸಿರುತ್ತೇನೆ. ಅವರು ಸದನಕ್ಕೆ ಬರುವುದಿಲ್ಲ, ಬೇರೆ ಯಾರಿಗೂ ಅವರ ಕೆಲಸವನ್ನು ಒಪ್ಪಿಸುವುದಿಲ್ಲ. ಈ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಯ ಸಚಿವರು ನನಗೆ ಮೊದಲು ಪ್ರಶ್ನೋತ್ತರ ವೇಳೆ ಎಲ್.ಸಿಯಲ್ಲಿದೆ ಎಂದು ಹೇಳಿ, ಅಲ್ಲಿ ಮುಗಿಸಿಕೊಂಡು ಎರಡು

ಗಂಟೆಗೆ ಬರುತ್ತೇನೆಂದು ಹೇಳಿದ್ದಾರೆ. ರೆವೆನ್ಯೂ ಮಿನಿಸ್ಟರ್‌ರವರು ನಮಗೆ ಕಮ್ಯೂನಿಕೇಟ್ ಮಾಡುವುದಿಲ್ಲ, ಬರುವುದೂ ಇಲ್ಲ. ಒಂದು ಕೆಲಸಮಾಡಿ Speaker cum PA to all Ministers ಎಂದು ಡೆಸಿಗ್ನೇಷನ್ ಚೇಂಜ್ ಮಾಡಿಸಿ ಒಂದು ರೆಸಲೂಷನ್ ಮಾಡಿ ಹೌಸ್‌ನಲ್ಲಿ. I will act a PA to all the Ministers. I have self-respect. You must realise this. I never expected that you wouled go this far in treating me. What I am to tell the Hon'ble Mmeber or we will adjourn the House and go. There is a limit. Please understand. There is a limit Mr. Nanaiah, please understand.

MR. M.C. NANAIAH :— I do agree with you. After the notices are being served to the Ministers, they shall be present in the House or they should keep the Hon'ble Speaker informed about their inability to attend for wahtever reasons. I do agree with you.

MR. SPEAKER :— I can pocket this insult once, twice. Do you want to repeat it every time?

SRI M.C. NANAIAH :— Sir it is not the intention of the Government to insult any one much less the Hon'ble Speaker. Let me make it very clear to you, I do not want the Speaker to be hurt. I will certainly take care of it. We will get the answer from the concerned Minister immediately.

ಅಧ್ಯಕ್ಷರು :— ಮುಂದಿನ ಒಂದನೇ ತಾರೀಖು ಸದನ ಮುಗಿಯುತ್ತದೆ. ಪ್ರಶ್ನೆಗಳನ್ನು ಕೇಳಿದರೆ ಅದಕ್ಕೆ ಸಮಯ ಕೇಳುತ್ತೀರಿ. ಶೂನ್ಯವೇಳೆ ನೋಟೀಸ್ ಕೊಟ್ಟರೆ ಸಂಬಂಧಪಟ್ಟ ಸಚಿವರು ಸದನಕ್ಕೆ ಬರುವುದೂ ಇಲ್ಲ. ವಿರೋಧ ಪಕ್ಷದವರು ಬಂದು ಕುಳುತುಕೊಂಡರು ನೀವು ಹಾಜರಿರುವುದಿಲ್ಲ. ಮುಖ್ಯಮಂತ್ರಿಗಳಿಗೆ ಸೌಜನ್ಯವಿದೆ, ಅವರು ಎಲ್ಲಾದರೂ ಹೋಗಬೇಕಿದ್ದರೆ ನನಗೆ ತಿಳಿಸಿ, ಅನುಮತಿ ತೆಗೆದುಕೊಂಡು ಹೋಗುತ್ತಾರೆ. ಹಿರಿಯ ಸಚಿವರಾದಂಥ ಮಂಜುನಾಥರವರು ಇಂದು ಬೆಳಿಗ್ಗೆ ನನಗೆ ಫೋನ್‌ಮಾಡಿ, ತಮ್ಮ ಊರಿನಲ್ಲಿ ಏನೋ ತೊಂದರೆ ಇದೆ, ಆದುದ್ದರಿಂದ ತುರ್ತಾಗಿ ಹೋಗಿ ಮೂರು ಗಂಟೆಗೆ ಬರುತ್ತೇನೆ ಎಂದು ಹೇಳಿದ್ದಾರೆ. ಯೋಚನೆಮಾಡಿ, ನೀವು ಒಂದಲ್ಲ ಒಂದು ದಿವಸ ದೊಡ್ಡ ದೊಡ್ಡ ಜವಾಬ್ದಾರಿ ಸ್ಥಾನದಲ್ಲಿ ಕುಳುತಂಥವರು. ಆ ಸ್ಥಾನದಲ್ಲಿ ಕುಳಿತ ಒಬ್ಬ ಮನುಷ್ಯನಿಗೆ ಹೇಗೆ ಅನಿಸಬಹುದು ಎಂದು ನೀವು ಯೋಚನೆ ಮಾಡಿ.

Sri. M.C. NANAIAH :— As Minister for Parliamentary Affairs, I am really sorry. We will ensure that these things will not happen in future. ಇದಕ್ಕೆ ಉತ್ತರವನ್ನು ನಾಳೆ ಕೊಡುತ್ತೇನೆ.

ಪುತ್ತೂರು ಪುರಸಭೆಯ ಮುಖ್ಯಾಧಿಕಾರಿಯಿಂದ ನಡೆದಿರುವ ಅವ್ಯವಹಾರದ ಬಗ್ಗೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಅಧ್ಯಕ್ಷರೇ, ಪುತ್ತೂರು ಪುರಸಭೆ ಒಂದು ದೊಡ್ಡ ಅವ್ಯಸ್ಥೆಯ ಆಗರವಾಗಿದೆ. ಅಲ್ಲಿಯ ಮುಖ್ಯಾಧಿಕಾರಿ ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾನೆ. ಪುರಸಭೆಗೆ ಬರಬೇಕಾದಂಥ ಆದಾಯದ ಮೂಲವಾದ ಮಾರುಕಟ್ಟೆಯನ್ನು ಹರಾಜಿನ ಮೂಲಕ ಕೊಡದೆ, ಅಧ್ಯಕ್ಷರ ಜೊತೆ ಶಾಮೀಲಾಗಿ ಹಿಂದಿನ ಮಟ್ಟಕ್ಕೆ ಸ್ವಲ್ಪ ಏರಿಸಿ ಈ ವರ್ಷ ಆದನ್ನು ಖಾಯಂ ಮಾಡಿ, ಪುರಸಭೆಗೆ ಬರುವಂಥ ಆದಾಯಕ್ಕೆ ತೊಂದರೆ ಮಾಡಿದ್ದಾರೆ. 'ಆಶ್ರಯ' ಯೋಜನೆಯ ಮನೆಗಳನ್ನು ಮಂಜೂರು ಮಾಡಿದ್ದರೂ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ನೀಡದೆ ಸತಾಯಿಸುತ್ತಿದ್ದಾರೆ. ಕಂದಾಯ ಇಲಾಖೆ ಮನೆ ನಿವೇಶನಕ್ಕಾಗಿ 18 ಎಕರೆ ಜಾಗವನ್ನು ಕೊಟ್ಟು ನಾಲ್ಕು ತಿಂಗಳು ಕಳೆದರೂ ಕೂಡ, ಆದನ್ನು ನಿವೇಶನವಾಗಿ ಪರಿವರ್ತಿಸದೆ, ಮನೆಗಳ ನಿವೇಶನ ಹಂಚಿಕೆ ಮಾಡಲು ತೊಂದರೆ ಮಾಡಿದ್ದಾರೆ. ಲೋಕೋಪಯೋಗಿ ರಸ್ತೆಯ ಬದಿಯಲ್ಲಿ ಗೂಡಂಗಡಿ ರಚಿಸುವಂತೆ ಕಾನೂನಿಗೆ ವಿರುದ್ಧವಾಗಿ ಲೈಸೆನ್ಸನ್ನು ನಿಡುವಂಥ ಕೆಲಸಗಳನ್ನು ಮಾಡಿ ಸಾರ್ವಜನಿಕರ ಹಿತಾಸಕ್ತಿಗೆ ಧಕ್ಕೆ ಉಂಟು ಮಾಡುತ್ತಿದ್ದಾರೆ. ಪುರಸಭೆಯ ಸ್ಥಾಯಿ ಸಮಿತಿಯ ಅಧ್ಯಕ್ಷರು ಸ್ಥಾಯಿ ಸಮಿತಿಯ ಸಭೆ ಕರೆಯಬೇಕೆಂದು ಸೂಚಿಸಿದ್ದರೂ ಕೂಡ ಸ್ಥಾಯಿ ಸಮಿತಿಯ ಸಭೆ ಕರೆಯದೆ ಅಲ್ಲಿ ಯಾವುದೇ ಕಾಮಗಾರಿ ನಡೆಯದ ಹಾಗೆ ತಡೆ ಉಂಟು ಮಾಡಿದ್ದಾರೆ. ಇವತ್ತು ಅಲ್ಲಿ ಪುರಸಭೆಯ ಸದಸ್ಯರು ಮತ್ತು ಮಾಜಿ ಶಾಸಕರು ಪ್ರತಿಭಟನೆ ಮಾಡುವಂಥ ಒಂದು ಅನಿವಾರ್ಯ ಸಂದರ್ಭ ಉಂಟಾಗಿದೆ. ಅಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ. ಈ ಮುಖ್ಯಾಧಿಕಾರಿ ತನ್ನ ಸರ್ವಾಧಿಕಾರ ಪ್ರವೃತ್ತಿಯನ್ನು ತೋರಿಸುತ್ತಿದ್ದಾನೆ. ಈ ರೀತಿ ಹದ್ದುಮೀರಿ, ಕಾನೂನಿಗೆ ವ್ಯತಿರಿಕ್ತವಾಗಿ ತನ್ನ ಸ್ವಾರ್ಥಕ್ಕೆ ಅನುಗುಣವಾಗಿ ಮತ್ತು ಜನ ವಿರೋಧಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವಂಥ ಪುತ್ತೂರು ಪುರಸಭೆಯ ಮಖ್ಯಾಧಿಕಾರಿಯನ್ನು ತಕ್ಷಣ ಅಮಾನತ್ತಿನಲ್ಲಿಡಬೇಕು ಮತ್ತು ಬದಲಿ ಮುಖ್ಯಾಧಿಕಾರಿಯನ್ನು ನೇಮಕ ಮಾಡಬೇಕು ಮತ್ತು ಆ ಮುಖ್ಯಾಧಿಕಾರಿಯ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೋಳ್ಳಬೇಕು ಎಂದು ನಾನು ಸರ್ಕಾರವನ್ನು ಆಗ್ರಹ ಮಾಡುತ್ತಿದ್ದೇನೆ.

ಶ್ರೀ. ಎಂ.ಸಿ. ನಾಣಯ್ಯ:— (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಸಭಾಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಂತೆ ಸಂಪೂರ್ಣವಾದ ಮಾಹಿತಿಯನ್ನು ತರಿಸಿ ಉತ್ತರವನ್ನು ಕೊಡುತ್ತೇವೆ.